**ದಿಃ 12.03.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರಿದ ಪಾಟೀ ಸವಾಲುಃ ವಾದಿ ಪರ ಶ್ರೀ ಪಿ ಎನ್ ಜೆ ವಕೀಲರಿಂದಃ

ಪಾನ್ ಬ್ರೋಕರ್ ಲೈಸೆನ್ಸ್ ಅಡಿಯಲ್ಲಿ ಚರ ವಸ್ತುಗಳನ್ನು ಮಾತ್ರ ಗಿರವಿಗೆ ಪಡೆದು ಹಣ ಕೊಡುವದು ಎಂದರೆ ಸಾಕ್ಷಿ ಚರ ಮತ್ತು ಸ್ಥಿರ ಎರಡನ್ನೂ ಕೂಡ ಪಡೆದು ಹಣ ಕೊಡುವುದು ಎನ್ನುತ್ತಾರೆ. ಲೈಸೆನ್ಸ್ ನಲ್ಲಿ ಕೊಟ್ಟಂತಹ ಹಕ್ಕುಗಳ ಪ್ರಕಾರವೇ ವ್ಯವಹಾರ ಮಾಡಲಾಗುತ್ತದೆ. ಪಾನ್ ಬ್ರೋಕರ್ ಲೈಸೆನ್ಸ್ ನಲ್ಲಿ ಸ್ಥಿರಾಸ್ತಿ ಪಡೆದು ಹಣ ಕೊಡುವ ಅಧಿಕಾರ ಇಲ್ಲ ಎಂದರೆ ಸರಿಯಲ್ಲ.

2. ದಿನಾಂಕ 30.08.1996ರಲ್ಲಿ ಒಂದನೇ ಪ್ರತಿವಾದಿ ಮತ್ತು ನನಗೆ ಕೃಷಿ ಭೂಮಿಯನ್ನು ಪಡೆದುಕೊಳ್ಳುವ ಅಧಿಕಾರ ಇರಲಿಲ್ಲ, ನಿಶೇದಿತ ವ್ಯಕ್ತಿಗಳಾಗಿದ್ದೆವು ಎಂದರೆ ಸರಿಯಲ್ಲ. ಹಾಗಾಗಿ ನಾವು ಹೇಳುವ ಕಾಲಕ್ಕೆ ದಾವಾ ಭೂಮಿಯನ್ನು ಅಡವು ತೆಗೆದುಕೊಳ್ಳಲಾಗಿತ್ತು ಎಂದು ಹೇಳಿರುವುದು ಕೂಡಾ ಸುಳ್ಳು ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರಗಳನ್ನೂ ಕೂಡಾ ಒಎಸ್ ನಂ 271/1997ರ ದಾವೆಯಲ್ಲಿ ಮರೆ ಮಾಚಿ ಸುಳ್ಳು ಡಿಕ್ರಿ ಪಡೆದಿದ್ದೇವೆ ಎಂದರೆ ಸರಿಯಲ್ಲ. ಹಾಗಾಗಿ ಸದರಿ ಒಎಸ್ ನಂ 271/1997ರಲ್ಲಿ ಮಾರ್ಟ್ ಗೇಜ್ ಡೀಡ್ ಆಗಿದೆ ಎಂದು ಹೇಳುವ ದಾಖಲೆಯನ್ನು ಹಾಜರುಮಾಡಿರಲಿಲ್ಲ ಎಂದರೆ ಸರಿಯಲ್ಲ. ಅಡವು ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸದೇ ಅಡವು ಡಿಕ್ರಿ ಪಡೆದುಕೊಳ್ಳಲಾಗಿದೆ ಎಂದರೆ ಸರಿಯಲ್ಲ. ಬಿ ಶೆಡ್ಯೂಲ್ ಆಸ್ತಿ ಮತ್ತುಎ ಶೆಡ್ಯೂಲ್ ಮನೆಯನ್ನು ಹೇಗಾದರೂ ಮಾಡಿ ಕಬಳಿಸಬೇಕು ಎಂಬ ಉದ್ದೇಶದಿಂದ ಯೋಜನಾ ಬದ್ದರಾಗಿ ನ್ಯಾಯಾಲಯಕ್ಕೆ ತಪ್ಪು ಮಾಹಿತಿ ನೀಡಿದ್ದೇವೆ ಎಂದರೆ ಸರಿಯಲ್ಲ. ಒಎಸ್ ನಂ 271/1997ರ ಸಂಪೂರ್ಣ ದಾವಾ ಪ್ರಕ್ರಿಯೇ ಹಾಗೂ ಅದರಲ್ಲಿ ಪಡೆದ ಪ್ರಿಲಿಮಿನರಿ ಡಿಕ್ರಿ, ಅಂತಿಮ ಡಿಕ್ರಿ, ಅಮಲ್ಜಾರಿ ಆದೇಶ, ಏಲಂ, ನ್ಯಾಯಾಲಯದ ಹರಾಜು, ನ್ಯಾಯಾಲಯದಿಂದ ಪಡೆದ ಸೇಲ್ ಸರ್ಟಿಫಿಕೇಟ್ ಮತ್ತು ನಂತರ ಪಡೆದ ಸ್ವಾದೀನ ಪಡೆದುಕೊಂಡ ರೀತಿ ಎಲ್ಲವನ್ನೂ ಮೋಸದಿಂದ ಪಡೆದಕೊಂಡ ಕಾರಣ ಅವೆಲ್ಲವೂ ಕೂಡಾ ಶೂನ್ಯ, ಅಸಿಂಧು ಎಂದರೆ ಸರಿಯಲ್ಲ.

3. ನಾನು ಕಾನೂನನ್ನು ಮೀರಿ ದಾವಾ ಬಿ ಶೆಡ್ಯೂಲ್ ಸ್ವತ್ತಿನಲ್ಲಿ ಕಟ್ಟಡ ನಂಬರ್ 10-153 ಇಲ್ಲದಿದ್ದರೂ ಕೂಡಾ ಕಾನೂನು ಬಾಹಿರವಾಗಿ ಮತ್ತು ಬಲಾತ್ಕಾರವಾಗಿ ವಶಕ್ಕೆ ಪಡೆದಿದ್ದೇನೆ ಎಂದರೆ ಸರಿಯಲ್ಲ. ದಾವಾ ಎ ಶೆಡ್ಯೂಲ್ಮತ್ತು ಬಿ ಶೆಡ್ಯೂಲ್ನಲ್ಲಿ ಇರುವ ರಸ್ತೆಯನ್ನೂ ಕೂಡಾ ದಿನಾಂಕ 25.03.2011ರಂದು ನಮ್ಮಿಂದ ನಿರ್ದೇಶಿತರಾಗಿರುವ

ಕೆಲಸಗಾರರು ವಾದಿಯವರಿಗೆ ಉಪಯೋಗಿಸಲು ಅಡ್ಡಿ ಪಡಿಸಿದ್ದರು ಎಂದರೆ ಸರಿಯಲ್ಲ. ದಿನಾಂಕ 25.03.2011ರಂದು ದಾವಾ ಸ್ವತ್ತಿನಲ್ಲಿರುವ ತೆಂಗಿನಕಾಯಿಯನ್ನು ವಾದಿಯರು ತೆಗೆಯಲು ಪ್ರಯತ್ನಿಸಿದಾಗ ನಮ್ಮ ಕೆಲಸಗಾರರು ಆಕ್ಷೇಪಿಸಿರುತ್ತಾರೆ ಎಂದರೆ ಸರಿಯಲ್ಲ. ದಾವೆಯಲ್ಲಿ ಕೇಳಿರುವ ಪರಿಹಾರಗಳಿಗೆ ವಾದಿಯರು ಅರ್ಹರಿರುತ್ತಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**ನನ್ನ ಉಕ್ತಲೇಖನ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೇ ಕೇ ಸ ಇದೆ.**

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,**
**ಬಂಟ್ವಾಳ.**